


ಸ್ವಲ್ಪ ದಿನಗಳ ಬಳಿಕ ಗಾಜಿನ ವ್ಯಾಪಾರಿಯೊಬ್ಬ ಆ ಊರಿಗೆ ಬಂದ. ಸುಬ್ಬ ಅವನಿಗೂ ಮೋಸಮಾಡಬೇಕೆಂದು ಯೋಚಿಸಿದ.

'ಆ ಮರದಲ್ಲಿ ಸೇಬುಗಳಿವೆ' ಎಂದ ವ್ಯಾಪಾರಿ. 'ಇಲ್ಲ, ಕಿತ್ತಳೆ ಇವೆ' ಎಂದ ಸುಬ್ಬ.

ಅವನು ಮನೆಗೆ ಬಂದು ಕೊಳಲಿನಲ್ಲಿ ಸಂತಸದಾಯಕ ರಾಗ ನುಡಿಸಿದೊಡನೆ ಸೇಬುಗಳು ಕಿತ್ತಳೆಗಳಾದವು. ವ್ಯಾಪಾರಿ ಇನ್ನೂರು ವರಹ ಕಳೆದುಕೊಂಡ. ಆದರೆ ಅವನು ಬುದ್ಧಿವಂತ ವ್ಯಾಪಾರಿ. ಅವನು ಸುಬ್ಬನಿಲ್ಲದ ವೇಳೆ ನೋಡಿ ಅವನ ಮನೆಗೆ ಹೋದ. ಅವನ ಹೆಂಡತಿಗೆ ಆ ಮರದ ಗುಟ್ಟು ಹೇಳಿದರೆ ತನ್ನ ಬಳಿ ಇರುವ ಸಾಮಾನುಗಳನ್ನೆಲ್ಲ ಕೊಡುವುದಾಗಿ ಹೇಳಿದ. ಆಸೆಗೆ ಹೆಂಡತಿ ಮರದ ಗುಟ್ಟನ್ನು ಹೇಳಿ, ಗಂಡನ ಕೊಳಲನ್ನು ಕೊಟ್ಟುಬಿಟ್ಟಳು.

ವ್ಯಾಪಾರಿ ಸುಬ್ಬನೊಡನೆ ಮತ್ತೆ ಪಂದ್ಯ ಕಟ್ಟಿದ. ಸೋತವನು ಗೆದ್ದವನಿಗೆ ತನ್ನ ಸರ್ವಸ್ವವನ್ನೂ ಕೊಟ್ಟುಬಿಡಬೇಕು ಎಂದ. ಸುಬ್ಬ ಸಂತೋಷದಿಂದ ಒಪ್ಪಿಕೊಂಡ.

ಮನೆಗೆ ಬಂದು ಕೊಳಲನ್ನು ಹುಡುಕುತ್ತಾನೆ. ಕೊಳಲು ಕಾಣದು. ಕಡೆಗೆ ಅವನು ಹೆಂಡತಿಯನ್ನು ಕೇಳಿದ. ಅವಳು ಹೆದರಿ ಬಾಯಿಬಿಟ್ಟಳು.

ಸುಬ್ಬ ಈ ಬಾರಿ ಸೋತ. ವ್ಯಾಪಾರಿಗೆ ತನ್ನ ಸಮಸ್ತವನ್ನೂ ಅರ್ಪಿಸಿದ. ಅನಂತರ ಕಷ್ಟಪಟ್ಟು ಗಳಿಸಿದ್ದು ಮಾತ್ರ ಮನುಷ್ಯನಿಗೆ ದಕ್ಕುತ್ತದೆ ಎಂದುಕೊಳ್ಳುತ್ತಾ ಹೊಲದಲ್ಲಿ ಕೆಲಸಮಾಡಿ ಹಣವಂತನಾದ.

(ಸಂಗ್ರಹ)